## ಎನ್‌ಐಟಿಕೆಯಲ್ಲಿ ಸಂಶೋಧನೆ, ವಿನ್ಯಾಸ, ಉದ್ಯಮಶೀಲ ತರಬೇತಿ ಶಿಬಿರ

# ಮಾರುಕಟ್ಟೆ ಸಂಶೋಧನೆಗೆ ಪ್ರತ್ಯೇಕ ವ್ಯವಸ್ಥೆ, ಸೌಲಭ್ಯ ಅಗತ್ಯ




**ಸುರತ್ಕಲ್, ಸೆ. 23:** ಉದ್ಯಮಿಗಳು ಕಠಿನ ಸವಾಲು ಎದುರಿಸಿ ಉದ್ಯಮವನ್ನು ಸ್ಥಾಪಿಸಿದರೂ ಇವರಿಗೆ ಮಾರುಕಟ್ಟೆಯನ್ನು ಸಂಶೋಧಿಸಲು ಹಾಗೂ ಉದ್ಯಮದಲ್ಲಿ ಹೆಚ್ಚಿನ ಯಶಸ್ಸು ಕಾಣಲು ಮಾರುಕಟ್ಟೆ ಸಂಶೋಧನೆಗೆ ಪ್ರತ್ಯೇಕ ವ್ಯವಸ್ಥೆ, ಸೌಲಭ್ಯ ಅಗತ್ಯವಿದೆ ಎಂದು ಎನ್‌ಐಟಿಕೆ ನಿರ್ದೇಶಕ ಪ್ರೊ| ಬಿ. ರವಿ ಹೇಳಿದರು.

ಶಿಕ್ಷಣ ಇಲಾಖೆ, ಸಂಶೋಧನ ವಿಭಾಗ, ವಾಧ್ವಾನಿ ಫಂಡೇಶನ್ ಹಾಗೂ ಎನ್‌ಐಟಕೆ ಸಹಭಾಗಿತ್ವದಲ್ಲಿ ಎನ್‌ಐಟಿಕೆಯಲ್ಲಿ ಸೆ. 27ರ ವರೆಗೆ ನಡೆಯುತ್ತಿರುವ ಸಂಶೋಧನೆ, ವಿನ್ಯಾಸ, ಉದ್ಯಮಶೀಲತೆ ಐಟಿಇ ಬೂಟ್ ಕ್ಯಾಂಪ್ ತರಬೇತಿ ಶಿಬಿರ, ಆವೃತ್ತಿ 2 ಹಂತ 2ರ ಉದ್ಘಾಟನೆ ಸಮಾರಂಭದಲ್ಲಿ ಸೋಮವಾರ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿದರು.

ದಿನದ 8 ಗಂಟೆಯ ವೃತ್ತಿ ಹುಡುಕಾಟಕ್ಕಿಂತ ಉದ್ಯಮ ಸ್ಥಾಪನೆಗೆ ಹೆಚ್ಚಿನ ಒಲವು ವ್ಯಕ್ತವಾಗಲು ಉದ್ಯಮಿಗಳಾಗು ವರರಿಗೆ ಸರಕಾರದಿಂದ ಸಬ್ಸಿಡಿ ಪ್ರೋತ್ಸಾಹ ಇತ್ಯಾದಿ ಸಿಗುತ್ತಿದ್ದು ಇದರ ಸದ್ಬಳಕೆ ಅಗತ್ಯ. ಇದರ ಜತೆಗೆ ಉದ್ಯಮಿಗಳಿಗೆ ಮಾರುಕಟ್ಟೆಯ ಸಂಶೋಧನಾ ಮಾಹಿತಿ ದೊರಕಿದಾಗ ಯಶಸ್ವೀ ಉದ್ಯಮಪತಿಗಳಾಗಿ ಹೊರ ಹೊಮ್ಮಲು ಸಾಧ್ಯವೆಂದರು.

ಅಖಿಲ ಭಾರತ ತಾಂತ್ರಿಕ ಶಿಕ್ಷಣ ಸಮಿತಿ (ಎಐಸಿಟಿಇ), ಕೇಂದ್ರ ಸರಕಾರದ ಎಐಸಿಟಿಇನ ನೋಡೆಲ್ ಸೆಂಟರ್ ಮುಖ್ಯಸ್ಥ ಅಭಿಷೇಕ್ ರಂಜನ್ ಕುಮಾರ್ ಮಾತನಾಡಿ, ಐಸಿಟಿಇಗೆ ಮೊದಲು ಸಾವಿರದಷ್ಟು ಯೋಜನೆಗಳು ಬರುತಿದ್ದು ಈಗ ಇದರ ಸಂಖ್ಯೆ 14 ಸಾವಿರಕ್ಕೇರಿದೆ. ಶಾಲೆಗಳಲ್ಲಿ ಸಂಶೋಧನ ಘಟಕಗಳಿಗೆ ಪ್ರೋತ್ಸಾಹ ನೀಡುವ ಯೋಜನೆಯಿದ್ದು 19 ವಿದ್ಯಾರ್ಥಿಗಳಿಗೆ ಸಂಶೋಧನ ನೆರವು ಒದಗಿಸಲಾಗಿದೆ. ಎಂದರು.

ಡಿಆರ್‌ವಿಯುಇ ಕಾರ್ಯಕಾರಿ ಅಧ್ಯಕ್ಷ ಎನ್‌ಐಟಿಕೆ ಹಳೆ ವಿದ್ಯಾರ್ಥಿ ರಾಮ್ ಶಾಸ್ತ್ರಿ ಕೇಂದ್ರ ಶಿಕ್ಷಣ ಇಲಾಖೆ ಅಧಿಕಾರಿ ಸ್ವಾನ್ ಜಯಕುಮಾರ್ ಮಾತನಾಡಿದರು. ಎನ್‌ಐಟಿಕೆ ಸ್ಟೆಪ್‌ನ ಪ್ರಭಾರ ಅಧಿಕಾರಿ ಪ್ರೊ| ಸುಬ್ರಾಯ ಹೆಗ್ಡೆ ಉಪಸ್ಥಿತರಿದ್ದರು.

ಸಮ್ಮೇಳದ ಸಂಯೋಜಕಿ ಪ್ರೊ| ಸುಪ್ರಭಾ ಕೆ.ಆರ್. ಪ್ರಸ್ತಾವಿಸಿದರು. ಹರಿಚರಣ್ ನಿರೂಪಿಸಿದರು.

ದೇಶಾದ್ಯಂತದ ಉನ್ನತ ಶಿಕ್ಷಣ ಸಂಸ್ಥೆಗಳಿಂದ ಸುಮಾರು 300 ಉದ್ಯಮ ಶೀಲ ವಿದ್ಯಾರ್ಥಿಗಳು ಭಾಗವಹಿಸಿದ್ದು ಉದ್ಯಮಶೀಲ ವಿದ್ಯಾರ್ಥಿಗಳಿಂದ ಮಾದರಿ ಗಳ ಪ್ರದರ್ಶನ ಆಯೋಜಿಸಲಾಗಿದೆ. ಕೇಂದ್ರಮಟ್ಟದಲ್ಲಿ ದಿಲ್ಲಿಯಲ್ಲಿ ನಡೆದ ಇಂತಹದ್ದೇ ಕಾರ್ಯಕ್ರಮದ ಆನ್ ಲೈನ್ ಪ್ರದರ್ಶನ ನಡೆಯಿತು.

Udayavani, Date: 24/09/24, p. no - 04